# ದುಪ್ಪಟ್ಟು ಅಂದಕ್ಕೆ ದುಪಟ್ಟಾ

■ ಯಜಾಸ್ ದುದ್ದಿಯಂಡ

ಸಲ್ವಾರ್ ಮೇಲೆ, ಲೆಹೆಂಗಾ ಮೇಲೆ ಸ್ಟೈಲಾದ ದುಪಟ್ಟಾ ಧರಿಸುವುದು ದುಪಟ್ಟಾ ಫ್ಯಾಷನ್. ಇದು ಮಾಡರ್ನ್ ಲುಕ್ ಕೊಡಲು ಸಹಕಾರಿ ಕೂಡ. ದುಪಟ್ಟಾದಲ್ಲೂ ಫ್ಯಾಷನೆಬಲ್ ಆಗಿರುವಂಥದ್ದು ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು ಇದು ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

ಟ್ರೆಂಡಿ ಲುಕ್ ನಲ್ಲಿ ಕಾಣಬಯಸುವ ಮಹಿಳೆಯರಿಗೆ ಸಲ್ವಾರ್ ಅಥವಾ ಲೆಹೆಂಗಾದೊಂದಿಗೆ ದುಪಟ್ಟಾ  ಧರಿಸಿದರೆ ಅದು ದುಪ್ಪಟ್ಟು ಮೆರುಗು ನೀಡುತ್ತದೆ. ಕುತ್ತಿಗೆ ಮತ್ತು ಭುಜಗಳನ್ನು ಕವರ್ ಮಾಡುವ ದುಪಟ್ಟಾವನ್ನು ಸಲ್ವಾರ್ ಕಮೀಜ್, ಕುರ್ತಾ ಹಾಗೂ ಲೆಹೆಂಗಾಗಳೊಂದಿಗೆ ಧರಿಸಿಕೊಳ್ಳಬಹುದು. ಭಾರತೀಯ ಸಾಂಪ್ರದಾಯಿಕ ಉಡುಗೆಗಳಲ್ಲಿ ಒಂದಾದ ದುಪಟ್ಟಾ ಬಹಳ ಹಿಂದಿನಿಂದಲೂ ಮಹತ್ವ ಪಡೆದುಕೊಂಡಿದೆ.

ದುಪಟ್ಟಾವು ಎರಡರಿಂದ ಎರಡೂವರೆ ಮೀಟರ್‌ನಷ್ಟು ಉದ್ದವಿರುವ ವಸ್ತ್ರ. ಬಾಲಿವುಡ್ ಸಿನಿಮಾಗಳಲ್ಲಿ ‘ಲಾಲ್ ದುಪಟ್ಟಾ ಉಡ್‌ಗಯಾ ರೇ’ ಎಂದು ಹಾಡಿನ ಮೂಲಕ ದುಪಟ್ಟಾದ ಮಹತ್ವ ತಿಳಿಸಲಾಗಿದೆ.

ಚೂಡಿದಾರ, ಕುರ್ತಾಗಳಿಗೆ ದುಪಟ್ಟಾ ಧರಿಸಿದರೆ ಅದು ಪ್ಲೆಸೆಂಟ್ ಲುಕ್ ಕೊಡುತ್ತದೆ. ಇದರಿಂದ ಇತರ ಪ್ರಯೋಜನಗಳು ಕೊಡ ಇವೆ. ದುಪಟ್ಟಾವನ್ನು ಬಿರುಬಿಸಿಲಿನಲ್ಲಿ ನಡೆದಾಡುವಾಗ ಸೂರ್ಯನ ಕಿರಣಗಳಿಂದ ತಪ್ಪಿಸಿಕೊಳ್ಳಲು ಹಾಗೂ ಚಳಿಗಾಲದ ನಡುಗುವ ಚಳಿಯಿಂದ ದೇಹವನ್ನು ಕಾಪಾಡಿಕೊಳ್ಳಬಹುದು. ಧೂಳಿನಿಂದ ನಿಮ್ಮ ಮುಖವನ್ನು ರಕ್ಷಿಸಿಕೊಳ್ಳಲು ದುಪಟ್ಟಾ ನೆರವಾಗುತ್ತದೆ. ಇದಲ್ಲದೆ ಹೊರಗಡೆ ಹೋಗುವಾಗ ಕತ್ತಿಗೆ ಸುತ್ತ ದುಪಟ್ಟಾ ಧರಿಸಿದರೆ ಸರಕಳ್ಳರಿಂದ ರಕ್ಷಣೆಯನ್ನು ಪಡೆಯಬಹುದು.

ಹಿಂದೆ ರಾಜ ಮಹಾರಾಜರೂ ಕೂಡ ಆಕರ್ಷಕ ದುಪಟ್ಟಾಗಳನ್ನು ಬಳಸುತ್ತಿದ್ದರು. ಮದುವೆ ಅಥವಾ ಶುಭ ಸಮಾರಂಭಗಳಲ್ಲಿ ಮದು ಮಕ್ಕಳಿಗೂ ಶಾಲು ಧರಿಸುವ ಕ್ರಮ ಇದೆ. ಸಾಂಪ್ರದಾಯಿಕ ವಸ್ತ್ರಗಳೊಂದಿಗೆ ಯುವಕರು ಶಾಲು ಧರಿಸಿದರೆ ಟ್ರೆಂಡಿ ಲುಕ್ ನೀಡುತ್ತದೆ.

ಕಾಟನ್, ಶಿಫಾನ್, ಖಾದಿ, ಸಿಲ್ಕ್, ನೆಟ್ಟೆಡ್, ಬಾಂದನಿ, ಶೈನಿಂಗ್ ಮುಂತಾದ ವೈವಿಧ್ಯಗಳಿವೆ. ರಂಗು ರಂಗಿನ ಕಾಟನ್ ದುಪಟ್ಟಾಗಳು ದಿನ ನಿತ್ಯದ ಉಡುಪಿಗೆ ಚೆನ್ನಾಗಿ ಹೊಂದಿಕೊಳ್ಳುತ್ತವೆ. ನೀವು ಧರಿಸುವ ಡ್ರೆಸ್‌ಗೆ ಮ್ಯಾಚಿಂಗ್ ಆಗುವಂತಹ ದುಪಟ್ಟಾ ಆಯ್ದುಕೊಳ್ಳುವುದು ಉತ್ತಮ. ನೆಟ್ಟೆಡ್ ದುಪಟ್ಟಾಗಳು ಹೆಚ್ಚು ಆಕರ್ಷಕವಾಗಿ ಕಾಣಿಸುತ್ತದೆ. ಡಾರ್ಕ್ ಮತ್ತು ವೈಟ್ ಕಲರ್ ಶೇಡ್ ನಲ್ಲಿರುವ ದುಪಟ್ಟಾಗಳು ಬ್ರೈಡಲ್ ಉಡುಪುಗಳಿಗೆ ಮತ್ತಷ್ಟು ಮೆರುಗು ನೀಡುತ್ತದೆ.





ಸಾಂಪ್ರದಾಯಿಕ ಉಡುಪಿನ ಭಾಗವಾದ ದುಪಟ್ಟಾ ಫ್ಯಾಷನ್ ತಕ್ಕಂತೆ ಹೊಸ ಟ್ರೆಂಡ್ ಆಗಿ ಬದಲಾಗುತ್ತಿದೆ. ಹೊಸ ರೀತಿಯ ವೈವಿಧ್ಯಮಯ ದುಪಟ್ಟಾಗಳು ಮಾರುಕಟ್ಟೆಗಳಲ್ಲಿ ಲಭ್ಯವಿದೆ. ಸೀರೆ ಉಡುವವರಿಗೆ ಬಣ್ಣ ಬಣ್ಣದ ಶಾಲುಗಳು ಲಭ್ಯ. ಕಸೂತಿ ಇರುವ ಕಾಶ್ಮೀರಿ ಶಾಲುಗಳು ವೈಭವೋಪೇತ ನೋಟ ನೀಡುತ್ತದೆ.

ದುಪಟ್ಟಾವನ್ನು ಹೆಗೆಲಿಗೇರಿಸಿ ಒಂದೇ ಬದಿಗೆ ಹಾಕಿಕೊಂಡರೆ ಚೆನ್ನಾಗಿ ಕಾಣಿಸುತ್ತಿರಿ. ದುಪಟ್ಟಾವನ್ನು ಬೇರೆ ಬೇರೆ ಸ್ಟೈಲಿನಲ್ಲಿ ಧರಿಸಿದರೆ ಇನ್ನಷ್ಟು ಆಕರ್ಷವಾಗಿ ಕಾಣುತ್ತೀರಿ. ಕಾಟನ್ ಇಲ್ಲದೆ ಪ್ರಿಂಟೆಡ್ ಸಲ್ವಾರ್ ಗಳಿಗೆ ಒಂದು ಬದಿಗೆ ಹಾಕಿದರೆ ಅಂದವಾಗಿ ಕಾಣಿಸಿಕೊಳ್ಳಬಹುದು. ದುಪಟ್ಟಾಗಳನ್ನು ಕುತ್ತಿಗೆ ಹಾಗೇ ಹಾಕುವ ಬದಲು ಅದನ್ನು ಒಂದು ಬಾರಿ ಕುತ್ತಿಗೆಗೆ ಸುತ್ತಿದಾಗ ಕ್ಯಾಶುವಲ್ ಲುಕ್ ನೀಡುತ್ತದೆ. ■